ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ,
<u>ಹೊನ್ನಾಳಿ</u>

<u>ಸಿ.ಸಿ. ನಂ.61/2026</u>

ಪಿರ್ಯಾದುದಾರರು ಃ ಹೊನ್ನಾಳಿ ಪೊಲೀಸರು.

- ವಿರುದ್ಧ -

ಆರೋಪಿತರು ಮೂರ್ತಿ.ಟಿ ಬಿನ್ ತಿಮ್ಮಪ್ಪ, 35 ವರ್ಷ
ವಾಸಃ ತ್ಯಾಗದಕಟ್ಟೆ ಗ್ರಾಮ, ಹೊನ್ನಾಳಿ ತಾಲ್ಲೂಕು.

<u>ದೋಷಾರೋಪಣೆ ಃ</u>

ಶ್ರೀ. ದೇವದಾಸ್ ಹೆಚ್., ಬಿ.ಎ., ಎಲ್‌ಎಲ್.ಬಿ. ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊನ್ನಾಳಿ ಆದ ನಾನು ಮಾಡಿದ ದೋಷಾರೋಪಣೆ ಏನೆಂದರೆಃ

ದಿನಾಂಕಃ **23.10.2025** ರಂದು ರಾತ್ರಿ **10.00** ಗಂಟೆ ಸಮಯದಲ್ಲಿ ಹೊನ್ನಾಳಿ ತಾಲ್ಲೂಕು ತ್ಯಾಗದಕಟ್ಟೆ ಗ್ರಾಮದಲ್ಲಿ ಸಾಕ್ಷಿ-1 ವೆಂಕಪ್ಪ ರವರು ಆರೋಪಿತನಿಗೆ ಬುದ್ದಿವಾದ ಹೇಳಲು ಕರೆದಾಗ ಏಕಾಏಕಿಯಾಗಿ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಪ್ರತಿದಿನ ನಿನ್ನದು ಇದೇ ಆಯಿತು ಸೂಳೇಮಗನೇ ಅಂತ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾ.ನ್ಯಾ..ಸಂ. ಕಲಂ.352 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

2.ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಕೈಕಾಲುಗಳಿಂದ ಮೈ-ಕೈ ಹೊಡದು ನೋವುಂಟುಪಡಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾ.ನ್ಯಾ.ಸಂ. ಕಲಂ.115(2) ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

3.ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರು ಮನೆಯ ಕಡೆಗೆ ಹೋಗುತ್ತಿದ್ದಾಗ ಅವರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿರುತ್ತೀರಿ. ಆ

ಮೂಲಕ ಆರೋಪಿಯಾದ ನೀವು ಭಾ.ನ್ಯಾ.ಸಂ ಕಲಂ.126(2) ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

4. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಸ್ವ-ಇಚ್ಚೆಯಿಂದ ಸಾಕ್ಷಿ-1 ರವರನ್ನು ದೂಡಿ ಬೀಳಿಸಿದ್ದರಿಂದ ಅವರ ಬಲಗಾಲಿನ ತೊಡೆಗೆ, ಚಪ್ಪೆಗೆ ಮತ್ತು ಬಲಮೊಣಕಾಲಿಗೆ ಪೆಟ್ಟುಬಿದ್ದು ತೀವ್ರ ಸ್ವರೂಪದ ಗಾಯಪಡಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾ.ನ್ಯಾ.ಸಂ ಕಲಂ.117(2) ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

5. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಇನ್ನೊಂದು ಸಾರಿ ಗಲಾಟೆ ಮಾಡಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾ.ನ್ಯಾ.ಸಂ ಕಲಂ.351(2) ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಮೇಲೆ ತಿಳಿಸಿದ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೇ?

ಉತ್ತರಃ

ಪ್ರಶ್ನೆ 2ಃ- ನೀವು ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

ಉತ್ತರಃ

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ಸ್ಥಳ ಃ ಹೊನ್ನಾಳಿ

ದಿನಾಂಕಃ **10-03-2026.** **(ಶ್ರೀ ದೇವದಾಸ್. ಹೆಚ್ )**

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,

ಹೊನ್ನಾಳಿ

Case called out, accused is present and Charge framed and same was read over and explained to the accused in the language known to him. Accused person pleaded not guilty and claim to be tried.

W/s to CW1 by:

PCJ., Honnali.